# ಕಥೆಗಾರನ ಕೈಯಲ್ಲಿ ಕೊಳಲು ಸುಖ ದುಃಖಕ್ಕೆ ಮಿಡಿವ ಕೊರಳು



ಸುರೇಶ ನಾಗಲಮಡಿಕೆ

## ಕಾಣ್ಕೆ ಕಣ್ಕಟ್ಟು

## ಹೊಸ ತಲೆಮಾರಿನ ಕಥನದ ಉತ್ತರಾರ್ಧ

ಹೊಸ ತಲೆಮಾರಿನಲ್ಲಿ ಕೆಲವರು ಮೌಖಿಕ ಕಥನ ತಂತ್ರಗಳನ್ನು ತಕ್ಕಮಟ್ಟಿಗೆ ಬಳಸುವ ಇರಾದೆಯನ್ನು ವ್ಯಕ್ತಪಡಿಸಿರುವುದು ಆರೋಗ್ಯಕರ ವಿಚಾರ. ಬಹುತೇಕ ಈ ತಂತ್ರಗಳು ಪ್ರಾದೇಶಿಕತೆಯ ಬೆನ್ನಲ್ಲಿ ಬರುವುದು ಸಹಜ. ಕೇವಲ ಜನಪದನಾಯಕರನ್ನೋ ಅಥವಾ ಆ ಬಗೆಯ ಕೆಲ ಸುಳಿವುಗಳನ್ನೋ ಬಳಸಿಕೊಂಡರೆ ಮಾತ್ರ ಮೌಖಿಕ ತಂತ್ರ ಎನ್ನಲಾಗದು. ಈ ದಾರಿಯಲ್ಲಿ ಗೋವಿಂದರಾಜು ಕಲ್ಲೂರು, ಸಂಗನಗೌಡ, ರಶ್ಮಿ ಕೆ.ಎಂ., ಶಶಿಕುಮಾರ್ ಎಸ್.ಜಿ., ಶರಣಬಸವ ಗುಡದಿನ್ನಿ, ಒಂದು ಕಥೆಯ ಮಟ್ಟಿಗೆ ವಿಕಾಸ್ ಮೌರ್ಯ ಮುಂತಾದವರು ಇದ್ದಾರೆ. ಇವರಲ್ಲಿ ಗೋವಿಂದರಾಜು ಮತ್ತು ಸಂಗನಗೌಡ ಜಾನಪದವನ್ನು ಕೊಂಚ ಮಟ್ಟಿಗೆ ತಿಳಿದಿದ್ದರಿಂದ ಅದರ ಒಳಗೂಢತೆಗಳನ್ನು ಬಲ್ಲರು. ಮೌಖಿಕ ವಿಧಾನದಲ್ಲಿ ಭೂತ ಮತ್ತು ವರ್ತಮಾನಗಳ ಗೆರೆಗಳು ಅಳಿಸಿಹೋಗಿರುತ್ತವೆ. ಕಾಲ ಅಲ್ಲಿ ನೆಪಮಾತ್ರ. ಸತ್ಯ ಮತ್ತು ಕಲ್ಪನೆಗಳು ಇಲ್ಲಿ ಬೆರೆಯಬಲ್ಲವು. ಕೆಲವು ಬಾರಿ ಮೌಖಿಕ ಕಥನ ಲಯಗಳು ತೀರಾ ಗಾರುಡಿಗತನದ್ದು ಎಂದು ಭಾವಿಸಿ ತಳ್ಳಿಹಾಕಲು ಸಾಧ್ಯವಿಲ್ಲ. ಅದರಲ್ಲಿ ನಿಸರ್ಗವೂ ಕೂಡ ಮನುಷ್ಯನ ವಿಕೃತತೆಯನ್ನು ಬಯಲು ಮಾಡುತ್ತದೆ. ಅಲ್ಲಿಯೂ ಅಸೂಯೆ, ದ್ವೇಷ, ದುಗುಡಗಳ ಜೊತೆಯಲ್ಲಿ ಅಪಾರವಾದ ಮಾನವ ಪ್ರೇಮವನ್ನು ಕಾಣಬಹುದು. ಸಾಮಾನ್ಯರು ರಾಜ–ರಾಣಿಯರಾಗುವ ಕಲ್ಪನೆ ಜನಪದರು ತಮ್ಮನ್ನು ತಾವು ಉನ್ನತೀಕರಿಸಿಕೊಳ್ಳುವ ಬಗೆಯಾಗಿದೆ. ಈ ವಿಧಾನದಲ್ಲಿ ಪ್ರಾದೇಶಿಕತೆಯ ಗಟ್ಟಿತನದಲ್ಲಿ ಮೈದಾಳಿದ ಸ್ವಗತ ಕ್ರಮ ಪ್ರಧಾನ ದಾರಿಯನ್ನು ಕಂಡುಕೊಳ್ಳುತ್ತದೆ.

'ಕುಸುಮಬಾಲೆ'ಯಲ್ಲಿ ಇದನ್ನು ದಟ್ಟವಾಗಿ ಕಾಣಬಹುದು. ಆದರೆ, ಹೊಸಬರು ಮೌಖಿಕ ತಂತ್ರವನ್ನು ತಮ್ಮತನಕ್ಕೆ ಒಗ್ಗಿಸಿಕೊಳ್ಳುವ ಮತ್ತು ಅನುಭವಗಳ ಆವರಣದಲ್ಲಿ 'ಇಂದಿನ' ದಾರಿಗಳಿಗೆ ತರಬೇಕಾದರೂ ಹಲ ಬಗೆಯ ಸವಾಲುಗಳಿವೆ. ವೈಚಾರಿಕತೆಯ ದಿಕ್ಕುಗಳು ಅಧಿಕಗೊಂಡಾಗ ಈ ತಂತ್ರ ತಾನಾಗಿ ಹೊರಬರುತ್ತದೆ. ಅಂಥ ಸಮಯದಲ್ಲಿ ರೂಪಕ ಮತ್ತು ಭಾವುಕತೆಗಳು ಕಥೆಯನ್ನು ಗೆಲ್ಲಿಸಬಹುದು; ಅವು ಕೂಡ ಕಥೆಗಾರನ ವಸ್ತುವನ್ನು ಕೈಹಿಡಿದಾಗ ಮಾತ್ರ. 'ಮುರಿದು ಕಟ್ಟುವುದು' ಎಂಬ